**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:**- ಕರ್ನಾಟಕ ಡಿಜಿಟಲ್ ರೇಡಿಯೋಗ್ರಫಿ ಮಿಷನ್ (KDRM) ಹಂತ-I ಅನ್ನು ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ 300 mA ಮತ್ತು 500 mA ಎಕ್ಸ್-ರೇ ವ್ಯವಸ್ಥೆಗಳಲ್ಲಿ ಗರಿಷ್ಠ 162 ಘಟಕಗಳನ್ನು ಡಿಜಿಟಲ್ ರೇಡಿಯೋಗ್ರಫಿ (DR) ವ್ಯವಸ್ಥೆಗೆ ಉನ್ನತೀಕರಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**- ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರ ಏಕಕಡತ ಸಂಖ್ಯೆ: HFWS-NFDS0FILE/22/2026-NFDS (e-2279940)

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರ ಏಕಕಡತದಲ್ಲಿ ಮಾನ್ಯ ಮುಖ್ಯಮಂತ್ರಿಗಳ 100 ದಿನಗಳ ಕಾರ್ಯಕ್ರಮದ 'ಎಲ್ಲರಿಗೂ ಆರೋಗ್ಯ' ಉಪಕ್ರಮದಡಿ, ರಾಷ್ಟ್ರೀಯ ಉಚಿತ ಔಷಧ ಮತ್ತು ರೋಗನಿರ್ಣಯ ಸೇವೆಗಳು (NFDS) ಕರ್ನಾಟಕ ಡಿಜಿಟಲ್ ರೇಡಿಯೋಗ್ರಫಿ ಮಿಷನ್ (KDRM) ಅನ್ನು ಪ್ರಸ್ತಾಪಿಸಿದೆ. ಇದರ ಉದ್ದೇಶ ತಾಂತ್ರಿಕವಾಗಿ ಸೂಕ್ತವಾಗಿರುವ CR ಎಕ್ಸ್-ರೇ ವ್ಯವಸ್ಥೆಗಳನ್ನು ಡಿಜಿಟಲ್ ರೇಡಿಯೋಗ್ರಫಿ (DR) ವ್ಯವಸ್ಥೆಗಳಿಗೆ ಪರಿವರ್ತಿಸುವ ಮೂಲಕ ಪ್ರಸ್ತುತ ಬಳಕೆಯಲ್ಲಿರುವ ಎಕ್ಸ್-ರೇ ಯಂತ್ರಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆಧುನೀಕರಿಸುವುದು. ಈ ಕುರಿತು ಅಗತ್ಯ ನಿರ್ಧಾರಣಾ ಸಮಿತಿ ಸಭೆಯಲ್ಲಿ 162 CR ಎಕ್ಸ್-ರೇ ಘಟಕಗಳನು ಹಂತ-1 ರಲ್ಲಿ ಒಳಗೊಳ್ಳಲು ಅನುಮೋದನೆ ನೀಡಲಾಗಿದ್ದು, ಸದರಿ ಪ್ರಸ್ತಾವನೆಗೆ ತಗಲುವ ವೆಚ್ಚ ರೂ.40.50 ಕೋಟಿಯಾಗಿರುತ್ತದೆ.

ಹಂತ-I ರ ಅಡಿಯಲ್ಲಿ, ತಾಂತ್ರಿಕ ಪರಿಶೀಲನೆಯ ನಂತರ 162 ಅರ್ಹ 300 mA ಮತ್ತು 500 mA ಎಕ್ಸ್-ರೇ ವ್ಯವಸ್ಥೆಗಳನ್ನು ಸಂಪೂರ್ಣ DR ಪರಿವರ್ತನಾ ಪ್ಯಾಕೇಜ್ ಮೂಲಕ ಡಿಜಿಟಲ್ ರೇಡಿಯೋಗ್ರಫಿ ವ್ಯವಸ್ಥೆಗೆ ಉನ್ನತೀಕರಿಸಲು ಪ್ರಸ್ತಾಪಿಸಲಾಗಿದೆ. ಸದರಿ ಖರೀದಿಯನ್ನು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (KSMSCL) ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 (KTPP Act) ಮತ್ತು ನಿಯಮಗಳನ್ವಯ ಖರೀದಿಸಲು ಪ್ರಸ್ತಾಪಿಸಲಾಗಿದೆ.

ಆ ಸಂಬಂಧ ನಡೆದ ತಾಂತ್ರಿಕ ವಿಶ್ಲೇಷಣಾ ಸಮಿತಿ ಸಭೆಯಲ್ಲಿ ವಿವರವಾದ ತಾಂತ್ರಿಕ ಅವಶ್ಯಕತೆಗಳನ್ನು ಪರಿಶೀಲಿಸಿದ್ದು, ಅನುಮೋದಿತ ಉಪಕರಣಗಳ ತಾಂತ್ರಿಕತೆಗೆ ಅನುಗುಣವಾಗಿ ಅಥವಾ ಉನ್ನತಮಟ್ಟದ ವ್ಯವಸ್ಥೆಗಳಿಗೆ ಸ್ಪರ್ಧಾತ್ಮಕ ಅವಕಾಶ ಕಲ್ಪಿಸುವುದರೊಂದಿಗೆ, ಪರಸ್ಪರ ಕಾರ್ಯಸಾಧ್ಯತೆ, ಚಿತ್ರ ಗುಣಮಟ್ಟ, ವಿಕಿರಣ ಸುರಕ್ಷತೆ ಮತ್ತು ದೀರ್ಘಕಾಲೀನ ಸೇವಾ ಯೋಗ್ಯತೆಯನ್ನು ಖಚಿತಪಡಿಸುವಂತೆ ರೂಪಿಸಲಾಗಿದೆ.

ಅನುಮೋದಿತ/ಶಿಫಾರಸ್ಸು ಮಾಡಿದ ಪ್ರಮುಖ ವ್ಯಾಪ್ತಿ:

| ಕ್ರ.ಸಂ. | ಘಟಕ | ಮುಖ್ಯ ಅವಶ್ಯಕತೆ |
|---|---|---|
| 1 | ಎರಡು ಫ್ಲಾಟ್-ಪ್ಯಾನೆಲ್ ಡಿಟೆಕ್ಟರ್‌ಗಳು | ಒಂದು ಟೇಬಲ್ ಬಕ್ಕಿಗಾಗಿ ಮತ್ತು ಮತ್ತೊಂದು ವರ್ಟಿಕಲ್ ಬಕ್ಕಿಗಾಗಿ; AED ಸಹಿತ ಕನಿಷ್ಠ ವೈರ್ಡ್ ಕಾರ್ಯಾಚರಣೆ. ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ವೈರ್ಡ್-ಕಮ್-ವೈರ್‌ಲೆಸ್ ವ್ಯವಸ್ಥೆಯನ್ನು ನೀಡಬಹುದು. |
| 2 | ಡಿಟೆಕ್ಟರ್ ಕಾರ್ಯಕ್ಷಮತೆ | CsI ಡಿಟೆಕ್ಟರ್; ಪಿಕ್ಸೆಲ್ ಪಿಚ್ 140 ಮೈಕ್ರೋಮೀಟರ್; ಸ್ಪೇಷಿಯಲ್ ರೆಸಲ್ಯೂಷನ್ 3.5 lp/mm; ಕನಿಷ್ಠ 16-bit ಅಕ್ವಿಸಿಷನ್; ಸಾಮಾನ್ಯ ರೇಡಿಯೋಗ್ರಫಿಗೆ ಸೂಕ್ತವಾದ ಮ್ಯಾಟ್ರಿಕ್ಸ್/DQE. |
| 3 | ಡಿಜಿಟಲ್ ಕಾರ್ಯಪ್ರವಾಹ | DICOM ಅನುಗುಣ ಅಕ್ವಿಸಿಷನ್ ಸಾಫ್ಟ್‌ವೇರ್; ವರ್ಕ್‌ಲಿಸ್ಟ್, ಇಮೇಜ್ ಪ್ರೊಸೆಸಿಂಗ್, Cobb angle ಸೇರಿ ಮಾಪನಗಳು, reject/repeat ಮತ್ತು exposure/dose analysis; PACS/RIS/ಟೆಲಿ-ರೇಡಿಯಾಲಜಿ ಸಿದ್ಧತೆ. |

| | | |
|---|---|---|
| 4 | AI ನೆರವಿನ CXR | ಪಲ್ಮನರಿ TB, consolidation, cavity, pneumothorax, nodule/mass, pleural effusion ಮತ್ತು cardiomegalyಗಾಗಿ screening/triage; ಲಭ್ಯವಿರುವಲ್ಲಿ prioritisation/localisation. |
| 5 | ವರ್ಕ್‌ಸ್ಟೇಷನ್/ಡಿಸ್ಪ್ಲೇ | Core i7 ಅಥವಾ ಸಮಾನ/ಉನ್ನತ; ಕನಿಷ್ಠ 32 GB RAM, 1 TB SSD, ಪರವಾನಗಿ ಪಡೆದ OS, ಕನಿಷ್ಠ 2 MP ಕ್ಲಿನಿಕಲ್/ಮೆಡಿಕಲ್-ಗ್ರೇಡ್ ಡಿಸ್ಪ್ಲೇ, UPS ಮತ್ತು ನೆಟ್‌ವರ್ಕಿಂಗ್ ಪರಿಕರಗಳು. |
| 6 | ಪರಿಕರಗಳು/ಏಕೀಕರಣ | ಅವಶ್ಯಕತೆಯಿರುವಲ್ಲಿ ವರ್ಟಿಕಲ್ ಬಕ್ಕಿ ಸ್ಟ್ಯಾಂಡ್ ಮತ್ತು ಡ್ರೈ-ಫಿಲ್ಮ್ ಪ್ರಿಂಟರ್; ಸೈಟ್ ಪರಿಶೀಲನೆ, ಅಳವಡಿಕೆ, ಕ್ಯಾಲಿಬ್ರೇಶನ್, ಕಮಿಷನಿಂಗ್, ತರಬೇತಿ ಮತ್ತು DICOM/PACS ಏಕೀಕರಣ. |
| 7 | ಸುರಕ್ಷತೆ/ ಗುಣಮಟ್ಟ | ಅನ್ವಯಿಸುವ AERB ಅವಶ್ಯಕತೆಗಳು, ಗುಣಮಟ್ಟ ಪ್ರಮಾಣೀಕರಣ/ನಿಯಂತ್ರಣ ಅನುಮೋದನೆಗಳು, ಚಿತ್ರ ಗುಣಮಟ್ಟ ಮೌಲ್ಯೀಕರಣ, ವಾರಂಟಿ, ನಿರೋಧಕ/ಬ್ರೇಕ್‌ಡೌನ್ ನಿರ್ವಹಣೆ ಮತ್ತು ಅಪ್‌ಟೈಮ್ ಬೆಂಬಲ. |

ಡಿಜಿಟಲ್ ರೇಡಿಯೋಗ್ರಾಫಿ ಮಿಷನ್ (KDRM) ಹಂತ-I ಅನ್ನು ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ 300 mA ಮತ್ತು 500 mA ಎಕ್ಸ್-ರೇ ವ್ಯವಸ್ಥೆಗಳಲ್ಲಿ ಗರಿಷ್ಠ 162 ಘಟಕಗಳನ್ನು ಡಿಜಿಟಲ್ ರೇಡಿಯೋಗ್ರಾಫಿ (DR) ವ್ಯವಸ್ಥೆಗೆ ಉನ್ನತೀಕರಿಸಲು, KTTP ಕಾಯ್ದೆ 1999 ಮತ್ತು ನಿಯಮಗಳನ್ವಯ ಕೇಂದ್ರದ Financial Assistance for Public Health Institutions ಅನುದಾನದಡಿ ರೂ. 40.50 ಕೋಟಿ ಅನುದಾನದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 146 ಎಫ್.ಪಿ.ಎಸ್. 2026**

**ಬೆಂಗಳೂರು, ದಿನಾಂಕ:10.09.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಡಿಜಿಟಲ್ ರೇಡಿಯೋಗ್ರಾಫಿ ಮಿಷನ್ (KDRM) ಹಂತ-I ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ 300 mA ಮತ್ತು 500 mA ಎಕ್ಸ್-ರೇ ವ್ಯವಸ್ಥೆಗಳಲ್ಲಿ ಗರಿಷ್ಠ 162 ಘಟಕಗಳನ್ನು ಡಿಜಿಟಲ್ ರೇಡಿಯೋಗ್ರಾಫಿ (DR) ವ್ಯವಸ್ಥೆಗೆ ಉನ್ನತೀಕರಿಸಲು, ಕೇಂದ್ರ ಸರ್ಕಾರದ Financial Assistance for Public Health Institutions ಅನುದಾನದಡಿ ರೂ. 40.50 ಕೋಟಿ ಅನುದಾನದಲ್ಲಿ KTTP ಕಾಯ್ದೆ ಮತ್ತು ನಿಯಮಗಳನ್ವಯ KSMSCL ಮುಖಾಂತರ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

**ಷರತ್ತುಗಳು:**

- ಈ ಯೋಜನೆಗೆ ಅಗತ್ಯವಿರುವ ರೂ.40.50 ಕೋಟಿಗಳ ಅನುದಾನವು ಕೇಂದ್ರ ಸರ್ಕಾರದ ಪಿ.ಎಚ್.ಐ. (PHI) ಬಜೆಟ್‌ನಲ್ಲಿ ಲಭ್ಯವಿಲ್ಲದಿದ್ದರೆ, ಕೆ.ಕೆ.ಆರ್.ಡಿ.ಬಿ. (KKRDB), ಕೆ.ಎಂ.ಇ.ಆರ್.ಸಿ. (KMERC), ಎನ್.ಎಚ್.ಎಂ. (NHM), ಡಿ.ಎಂ.ಎಫ್. (DMF) ಹಾಗೂ ಇತರ ಲಭ್ಯವಿರುವ ಯೋಜನೆಗಳು/ಮೂಲಗಳ ಮೂಲಕ ಪರ್ಯಾಯ ನಿಧಿಯನ್ನು ಪರಿಗಣಿಸತಕ್ಕದ್ದು.
- ಸರಬರಾಜು ಮಾಡುವ ಉಪಕರಣಗಳ ಗುಣಮಟ್ಟವನ್ನು ಮತ್ತು ಪ್ರಸ್ತಾವಿತ ತಾಂತ್ರಿಕ ಅವಶ್ಯಕತೆಗಳನ್ನು ಸಮಂಜಸವಾದ ಬೆಲೆಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು.
- ಯಾವುದೇ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ಕೋರದೆ, ಲಭ್ಯವಿರುವ ಮಾನವ ಸಂಪನ್ಮೂಲವನ್ನೇ ಬಳಸತಕ್ಕದ್ದು.

- ರಾಜ್ಯದ ಅನುದಾನದಿಂದ ಯಾವುದೇ ಹೆಚ್ಚುವರಿ ಅನುದಾನವನ್ನು ಕೋರುವಂತಿಲ್ಲ.
- ಅಸ್ತಿತ್ವದಲ್ಲಿರುವ ಎಕ್ಸ್-ರೇ ವ್ಯವಸ್ಥೆಯ ಬದಲಿಗೆ ಡಿಜಿಟಲ್ ಎಕ್ಸ್-ರೇ ಯಂತ್ರಗಳನ್ನು ಅಳವಡಿಸುವುದರಿಂದ ಬೇಡಿಕೆ ಕಡಿಮೆಯಾಗುತ್ತದೆ ಮತ್ತು ಬಹುಶಃ ಭೌತಿಕ ಎಕ್ಸ್-ರೇ ಫಿಲ್ಮ್‌ಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬಹುದು. ಇದರಿಂದ ಭೌತಿಕ ಎಕ್ಸ್-ರೇ ಫಿಲ್ಮ್‌ಗಳ ಖರೀದಿಯಲ್ಲಿ ಗಣನೀಯ ಉಳಿತಾಯವಾಗಲಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- ಈ ಪ್ರಸ್ತಾವನೆ ಹಾಗೂ ಇತರೆ ಪ್ರಸ್ತಾವನೆಗಳ ಅಡಿಯಲ್ಲಿ ಖರೀದಿಸುತ್ತಿರುವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಪರಸ್ಪರ ಹೊಂದಿಕೊಳ್ಳುವಂತೆ ಖಚಿತಪಡಿಸಿಕೊಳ್ಳತಕ್ಕದ್ದು. ಈ ಮೂಲಕ ನಿರೀಕ್ಷಿತ ಕಾರ್ಯಾಚರಣೆ ಮತ್ತು ಆರ್ಥಿಕ ಸುಧಾರಣೆಗಳನ್ನು ಸಾಧಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 683 EXP-5 2026, ದಿನಾಂಕ:02.09.2026 ರಲ್ಲಿ ನೀಡಿರುವ ಸಹಮತಿ ಹಾಗೂ ಸಚಿವ ಸಂಪುಟವು ಪ್ರಕರಣ ಸಂಖ್ಯೆ: C.508/2026, ದಿನಾಂಕ:09.09.2026 ರಲ್ಲಿ ನೀಡಿರುವ ಅನುಮೋದನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಪುಷ್ಪ) 10|9|26
ಸರ್ಕಾರದ ಜಂಟಿ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ :

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಲೆಕ್ಕ ಮತ್ತು ತನಿಖೆ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂ:5398, ಬೆಂಗಳೂರು
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ ಮಾಗಡಿ ರಸ್ತೆ, ಬೆಂಗಳೂರು.
3. ಅಭಿಯಾನ ನಿರ್ದೇಶಕರು,ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯಸೌಧ, ಮಾಗಡಿ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಖಜಾನೆ ಇಲಾಖೆ, ಕೆ.ಪಿ.ಟಿ.ಸಿ.ಎಲ್.ಕಟ್ಟಡ, ಅರಮನೆ ರಸ್ತೆ, ಬೆಂಗಳೂರು. ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
6. ಸರ್ಕಾರದ ಅವರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ.
7. ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-5, ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ ಬಿಡಿ ಪ್ರತಿಗಳು.

ಪ್ರತಿ:

1. ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು